ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 225 |
| ಸದಸ್ಯರ ಹೆಸರು | : | ಶ್ರೀ ಎಸ್.ಎನ್. ನಾರಾಯಣ ಸ್ವಾಮಿ ಕೆ.ಎಂ. (ಬಂಗಾರಪೇಟೆ) |
| ಉತ್ತರಿಸುವ ದಿನಾಂಕ | : | 19-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಬೆಂಗಳೂರು-ಚೆನ್ನೈ ನೈಸ್ ರಸ್ತೆಯ ಪ್ರಗತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್ (NE-7)ರ ಕಿ.ಮೀ. 0.00 ರಿಂದ ಕಿ.ಮೀ. 71.00ರ ವರೆಗಿನ ರಸ್ತೆಯನ್ನು 3 ಪ್ಯಾಕೇಜ್ ಗಳಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾದಿಕಾರದಿಂದ ಕೈಗೊಂಡಿದ್ದು, ಪ್ರಗತಿಯಲ್ಲಿರುತ್ತದೆ. |
| ಆ | ಬಂದಿದ್ದಲ್ಲಿ, ಸದರಿ ರಸ್ತೆಯು ಬಂಗಾರಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಂಗಾರಪೇಟೆ -ಹರಟ್ಟಿ ರಸ್ತೆ, ಬಂಗಾರಪೇಟೆ-ಸೂಲಿಕುಂಟೆ ರಸ್ತೆ, ಬಂಗಾರಪೇಟೆ-ಮರಗಲ್ ರಸ್ತೆ, ಬಂಗಾರಪೇಟೆ-ಹುನ್ಕುಂಡ ರಸ್ತೆ, ಬೀರಂಡಹಳ್ಳಿ ರಸ್ತೆ, ಐತಾಂಡಹಳ್ಳಿ ರಸ್ತೆಗಳ ಮುಖಾಂತರ ಹಾದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್ ರಸ್ತೆಯು ಬಂಗಾರಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಂಗಾರಪೇಟೆ -ಹರಟ್ಟಿ ರಸ್ತೆ, ಬಂಗಾರಪೇಟೆ-ಸೂಲಿಕುಂಟೆ ರಸ್ತೆ, ಬಂಗಾರಪೇಟೆ-ಮರಗಲ್ ರಸ್ತೆ, ಬಂಗಾರಪೇಟೆ-ಹುನ್ಕುಂಡ ರಸ್ತೆ, ಬೀರಂಡಹಳ್ಳಿ ರಸ್ತೆ, ಐತಾಂಡಹಳ್ಳಿ ರಸ್ತೆಗಳ ಪಕ್ಕದಲ್ಲಿ ಹಾದುಹೋಗುತ್ತದೆ. |
| ಇ | ನೈಸ್ ರಸ್ತೆ ಕಾಮಗಾರಿಯು ನಡೆಯುತ್ತಿರುವ ಭಾಗದ ರಸ್ತೆಗಳೆಲ್ಲ ಸಂಪೂರ್ಣ ಹಾಳಾಗಿದ್ದು, ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕರು ಓಡಾಡಲು ಅನಾನುಕೂಲವಾಗಿದ್ದು, ಹಾಳಾಗಿರುವ ರಸ್ತೆಗಳನ್ನು ಯಾವ ಇಲಾಖೆಯ ಅನುದಾನದಲ್ಲಿ ಯಾವ ಕಾಲಮಿತಿಯಲ್ಲಿ ಸರಿಪಡಿಸಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು) | ಪ್ರಸ್ತಾವಿತ ಬೆಂಗಳೂರು ಚನ್ನೈ ಎಕ್ಸಪ್ರೆಸ್‌ವೇ ಗ್ರೀನ್ ಫೀಲ್ಡ್ ಅಲೈನ್‌ಮೆಂಟ್ ಆಗಿರುತ್ತದೆ. ಈ ರಸ್ತೆ ನಿರ್ಮಾಣ ಕಾಮಗಾರಿಗಾಗಿ ಈ ಭಾಗದಲ್ಲಿರುವ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ವಾಣಿಜ್ಯ ವಾಹನಗಳ ದಟ್ಟಣೆಯು ಹೆಚ್ಚಾಗಿದ್ದು, ಸದರಿ ರಸ್ತೆಗಳು ಹಾಳಾಗಿರುತ್ತವೆ. ಈ ರಸ್ತೆಗಳನ್ನು ದುರಸ್ಥಿಗೊಳಿಸಲು ರೂ.13.70 ಕೋಟಿ ಅನುದಾನದ ಅವಶ್ಯವಿದ್ದು, ಲೋಕೋಪಯೋಗಿ ಇಲಾಖೆಯಲ್ಲಿ ಅನುದಾನದ ಲಭ್ಯತೆಯನುಸಾರ ಕೈಗೆತ್ತಿಕೊಳ್ಳಲಾಗುವುದು. 2022-23ನೇ ಸಾಲಿನಲ್ಲಿ ಸದರಿ ರಸ್ತೆಗಳ ವಾರ್ಷಿಕ ನಿರ್ವಹಣೆಗೆ ರೂ.10.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |

ಸಂಖ್ಯೆ: ಲೋಇ 412 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

## ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:225ಕ್ಕೆ ವಿವರಗಳು

## ಬಂಗಾರಪೇಟೆ ತಾಲ್ಲೂಕು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ರಸ್ತೆಗಳಲ್ಲಿ ಎಕ್ಸ್‌ಪ್ರೆಸ್ ಹೈವೇ ಹಾದು ಹೋಗುತ್ತಿದ್ದು ಹಾಳಾಗುತ್ತಿರುವ ರಸ್ತೆಗಳ ವಿವರಗಳು

| ಕ್ರ ಸಂ | ರಸ್ತೆಯ ಹೆಸರು | ರಸ್ತೆಯ ವರ್ಗ | ಹಾಳಾಗಿರುವ ರಸ್ತೆ ಉದ್ದ (ಕಿ.ಮೀ.ಗಳಲ್ಲಿ) | | | 2022-23ನೇ ಸಾಲಿಗೆ ಒದಗಿಸಿರುವ ಅನುದಾನ (ರೂ.ಲಕ್ಷಗಳಲ್ಲಿ) | ಹೆಚ್ಚುವರಿಯಾಗಿ ಬೇಕಾಗಿರುವ ಅನುದಾನ (ರೂ.ಲಕ್ಷಗಳಲ್ಲಿ) | ಷರಾ |
|---|---|---|---|---|---|---|---|---|
| | | | ಯಿಂದ | ವರೆಗೆ | ಒಟ್ಟು ಉದ್ದ | | | |
| 1) | ಬಂಗಾರಪೇಟೆ ಬಾಗೇಪಲ್ಲಿ ವಯಾ ಕೋಲಾರ ರಸ್ತೆ ರಾ.ಹೆ-05 ರಸ್ತೆ | ರಾಜ್ಯ ಹೆದ್ದಾರಿ | 0.00 | 5.00 | 5.00 | 4.00 | 200.00 | ರಸ್ತೆಯ ಆಯ್ದ ಭಾಗಗಳಲ್ಲಿ ಗುಂಡಿಗಳನ್ನು ಮುಚ್ಚಿ ಮರು ಡಾಂಬರೀಕರಣ ಮಾಡುವ ಅವಶ್ಯಕತೆ ಇರುತ್ತದೆ |
| 2) | ಹೊಸಕೋಟೆ ವೆಂಕಟಗಿರಿ ಕೋಟೆ ರಾ.ಹೆ-95 ರಸ್ತೆ | ರಾಜ್ಯ ಹೆದ್ದಾರಿ | 49.00 | 51.00 | 2.00 | 0.00 | 150.00 | ರಸ್ತೆಯ ಆಯ್ದ ಭಾಗಗಳಲ್ಲಿ ಗುಂಡಿಗಳನ್ನು ಮುಚ್ಚಿ ಮರು ಡಾಂಬರೀಕರಣ ಮಾಡುವ ಅವಶ್ಯಕತೆ ಇರುತ್ತದೆ |
| 3) | ಬಂಗಾರಪೇಟೆ ವಕ್ಕಲೇರಿ ರಸ್ತೆ | ಜಿಲ್ಲಾ ಮುಖ್ಯ ರಸ್ತೆ | 0.00 | 9.30 | 9.30 | 0.00 | 700.00 | ರಸ್ತೆಯ ಆಯ್ದ ಭಾಗಗಳಲ್ಲಿ ಹೊಸದಾಗಿ ರಸ್ತೆ ನಿರ್ಮಾಣ ಮಾಡಿ ಮರು ಡಾಂಬರೀಕರಣ ಮಾಡುವುದು |
| 4) | ಬಂಗಾರಪೇಟೆ ಹರಟಿ ರಸ್ತೆ | ಜಿಲ್ಲಾ ಮುಖ್ಯ ರಸ್ತೆ | 0.00 | 4.00 | 4.00 | 6.00 | 300.00 | ರಸ್ತೆಯನ್ನು ಹೊಸದಾಗಿ ನಿರ್ಮಾಣ ಮಾಡಿ ಡಾಂಬರೀಕರಣ ಮಾಡುವ ಅವಶ್ಯಕತೆ ಇರುತ್ತದೆ |
| 5) | ರಾಜ್ಯ ಹೆದ್ದಾರಿ-95 ರಿಂದ ನೇರಳೆಕೆರೆ, ದೊಡ್ಡೂರು, ದೊಡ್ಡ ಹಳ್ಳಿ, ಮಾದಮುತ್ತನಹಳ್ಳಿ ಮತ್ತು ಹುನ್ಕುಂದ ಮಾರ್ಗವಾಗಿ ರಾಜ್ಯ ಹೆದ್ದಾರಿ-96 ಕ್ಕೆ ಸೇರುವ ರಸ್ತೆ | ಮೇಲ್ದರ್ಜೆಗೇರಿಸಿದ ಜಿಲ್ಲಾ ಮುಖ್ಯ ರಸ್ತೆ | 0.00 | 6.00 | 6.00 | 0.00 | 10.00 | ರಸ್ತೆ ಮೇಲ್ಮೈನ ಗುಂಡಿಗಳಿಗೆ ಡಾಂಬರು ತೇಪೆ ಮಾಡಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡುವುದು. |
| 6) | ಹರಟಿ ರಸ್ತೆಯಿಂದ ಐತಾಂಡ ಹಳ್ಳಿ, ಕಾಮಾಂಡಹಳ್ಳಿ, ಮಾವ ಹಳ್ಳಿ, ನಾಯಕರಹಳ್ಳಿ, ಹರಟಿ ಮತ್ತು ಕೋಟಿಗಾನಹಳ್ಳಿ ಮಾರ್ಗವಾಗಿ ರಾಜ್ಯ ಹೆದ್ದಾರಿ-96 ಕ್ಕೆ ಸೇರುವ ರಸ್ತೆ | ಮೇಲ್ದರ್ಜೆಗೇರಿಸಿದ ಜಿಲ್ಲಾ ಮುಖ್ಯ ರಸ್ತೆ | 0.00 | 5.00 | 5.00 | 0.00 | 10.00 | ರಸ್ತೆ ಮೇಲ್ಮೈನ ಗುಂಡಿಗಳಿಗೆ ಡಾಂಬರು ತೇಪೆ ಮಾಡಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡುವುದು. |
| | **ಒಟ್ಟು** | | | | **31.30** | **10.00** | **1370.00** | |